ಓ ಎಸ ನಂ.34/2023
ಪಿ.ಡಬ್ಲ್ಯೂ-1 ನಿಂಗಪ್ಪ ತಂದೆ ಅಂಬರಾಯ

**(ಇಂದು ದಿನಾಂಕಃ 22-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

<u>ಪಾಟೀ ಸವಾಲುಃ ಶ್ರೀ ಎ ಎಸ್ ಕೆ ವಕೀಲರಿಂದ.</u>

ದಾವೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ನಮ್ಮ ತಂದೆಯ ಹೆಸರು ಅಂಬರಾಯ ಎಂದರೆ ಸರಿ. ನಮ್ಮ ತಂದೆಯವರಿಗೆ ಒಬ್ಬ ಸಹೋದರನಿದ್ದು, ಅವರ ಹೆಸರು ಬಸಪ್ಪ ಆಗಿರುತ್ತದೆ. ನಮ್ಮ ತಂದೆಯವರಿಗೆ ಅಂಬಬಾಯಿ ಎಂಬ ಸಹೋದರಿ ಇದ್ದು, ಅವರು ಈಗ ಮೃತರಾಗಿರುತ್ತಾರೆ. ಬಸಪ್ಪರವರಿಗೆ 3 ಜನ ಹೆಣ್ಣುಮಕ್ಕಳು ಒಬ್ಬ ಶರಣಪ್ಪ ಎಂಬ ಗುಂಡು ಮಗ ಇರುತ್ತಾರೆ. ಬಸಪ್ಪರವರು ಈಗ ಮೃತರಾಗಿರುತ್ತಾರೆ. ಅಂಬರಾಯ ಮತ್ತು ಬಸಪ್ಪರವರಿಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಅವರು 1995 ರಲ್ಲಿ ವಿಭಾಗ ಆಗಿರುತ್ತಾರೆ ಎನ್ನುತ್ತಾರೆ. 1995 ರ ಮೊದಲು ನಮ್ಮ ತಂದೆ ಮತ್ತು ನಮ್ಮ ಕಾಕರವರು ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಸರಿ.

2. ನಮ್ಮ ತಂದೆ ಅಂಬರಾಯರವರಿಗೆ ನಾವು 3 ಜನ ಮಕ್ಕಳಿರುತ್ತೇವೆ. ನನಗೆ ಒಬ್ಬಳು ಸಹೋದರಿ ಮತ್ತು ಒಬ್ಬ ಸಹೋದರ ಇರುತ್ತಾರೆ. ನಾನು ಡಿಗ್ರಿ ಓದಿರುತ್ತೇನೆ. ನನ್ನ ತಮ್ಮ 1ನೇ ಪ್ರತಿವಾದಿಗೆ ಓದು-ಬರಹ ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸಹಿ ಮಾಡುತ್ತಾನೆ ಎನ್ನುತ್ತಾರೆ. ನನ್ನ ಸಹೋದರಿ 2ನೇ ಪ್ರತಿವಾದಿಗೆ ಓದು-ಬರಹ ಬರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಸರ್ವೆ ನಂಬರ 30 ಮತ್ತು ಸರ್ವೆ ನಂಬರ 31 ಇರಬಹುದು. ನಾನು ಬ್ಯಾಂಕ ಮ್ಯಾನೇಜರ ಆಗಿದ್ದೆ ಎಂದರೆ ಸರಿ. ನಾನು 1981 ರಲ್ಲಿ ನೌಕರಿಗೆ ಸೇರಿರುತ್ತೇನೆ.

3. 1995 ರಲ್ಲಿ ಆದ ಪಾಲಿನಲ್ಲಿ ನಮ್ಮ ತಂದೆಯವರಿಗೆ ಎಷ್ಟು ಆಸ್ತಿ ಬಂದಿತ್ತು ಮತ್ತು ನಮ್ಮ ಕಾಕರವರಿಗೆ ಎಷ್ಟು ಆಸ್ತಿ ಹೋಗಿತ್ತು ಎಂದು ನನಗೆ ಹೇಳಲು ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.